ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.
ಸಿ.ಸಿ. ನಂ.ಃ 355/2019

.....................................................................

CW 04
PW 03

| | | |
|---|---|---|
| ಹೆಸರು | ಃ | ಸೋಮಪ್ಪ ಕುರಿ |
| ಗಂಡನ ಹೆಸರು | ಃ | ಫಕೀರಪ್ಪ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ನಿವೃತ್ತ ಉಪ ವಲಯ ಅರಣ್ಯಾಧಿಕಾರಿ |
| ವಾಸಸ್ಥಳ | ಃ | ಡಿ ಎಸ್ ಹಡಗಲಿ ತಾಃ ರೋಣ, |

ದಿನಾಂಕ 20-08-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನಾನು 2013 ರಿಂದ 2024 ರ ವರೆಗೆ ಸಾಂಬ್ರಾಣಿ ಉಪ ವಲಯ ಅರಣ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 19-06-2018 ರಂದು ಚಾಸಾ 7 ರವರನ್ನು ನಮ್ಮನ್ನು ಕರೆಯಿಸಿ ಹೊಸೂರು ಶಾಖೆಯ ದೊಡ್ಡಕೊಪ್ಪ ಬೀಟ್ ನಲ್ಲಿ ಸಾಗ ಗಿಡಗಳನ್ನು ಕಡಿದಿರುವ ಬಗ್ಗೆ ಭಾತ್ಮಿ ಬಂದಿದೆ ಎಂದು ನನಗೆ, ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರನ್ನು ಹಾಗೂ ಸಿಬ್ಬಂದಿಯವರಿಗೆ ತಿಳಿಸಿ ನಮ್ಮ ಇಲಾಖಾ ವಾಹನ ಸಂಖ್ಯೆ ಕೆಎ-31/ಜಿ/229 ನೇದ್ದರಲ್ಲಿ ದೊಡ್ಡಕೊಪ್ಪ ಬೀಟ್ ಗೆ ರವರಿಗೆ ಕರೆದುಕೊಂಡು ಹೋದರು. ಅಲ್ಲಿ 20 ರಿಂದ 30 ನಿಮಿಷಗಳ ವರೆಗೆ ಗಸ್ತು ತಿರುಗಿ ಜತಗಾ ಹೊಸುರು ದಿಂದ ತಟ್ಟಿಗೇರಿಗೆ ಹೋಗುವ ಪಿ ಬ್ಯೂ ಡಿ ರಸ್ತೆಯಿಂದ ಬಲಗೆಡೆಯ ಅರಣ್ಯದಲ್ಲಿ 300 ರಿಂದ 400 ಮೀಟರ ಅಂತರದಲ್ಲಿ ಇತ್ತೀಚಿಗೆ ಕಡೆದಿರುವ ಒಂದು ಬುಡುಚಿ ಸಿಕ್ಕಿತು. ಮುಂದುವರೆದು ಸೂಕ್ಷ್ಮವಾಗಿ ಪರಿಶೀಲಿಸಲಾಗಿ 8 ಬುಡಚಿಗಳು ಸಿಕ್ಕವು. ಸದರಿ ಬುಡುಚಿಯ ಮೇಲೆ ಇಲಾಖಾ ಗುನ್ನೆ ಛಾಪಾ ಗುರುತು ಇರಲಿಲ್ಲ. ಅದರಲ್ಲಿ ಎರಡು ಹಳೆಯದು, 6 ಹೊಸ ಬುಡುಚಿಗಳು ಇದ್ದವು. ಅಳತೆ ಟೇಪಿನ ಸಹಾಯದಿಂದ ಅವುಗಳನ್ನು ಅಳತೆ ಮಾಡಿ ಒಟ್ಟು ಬುಡುಚಿಯ ಸುತ್ತಳತೆ ಮತ್ತು ಎತ್ತರದ ಅಳತೆಯನ್ನು ತೆಗೆದುಕೊಳ್ಳಲಾಯಿತು. ಸದರಿ ಮರಗಳನ್ನು ಯಾರು ಕಡಿದಿರಬಹುದು ಎಂದು ಮಾಲ್ಕಿ ಜಾಗದಲ್ಲಿ

ಕೆಲಸ ಮಾಡುತ್ತಿದ್ದ ರೈತರನ್ನು ವಿಚಾರಿಸಲಾಗಿ ಹಲವು ಬಾರಿ ದೊಡ್ಡಕೊಪ್ಪ ಗ್ರಾಮದ ಭೀಮಣ್ಣ ಬಾಬು ಮೇತ್ರಿ, ರಾಯಣ್ಣ ಬಾಬು ಮೇತ್ರಿ ಮತ್ತು ವಿಠ್ಠಲ ಶಿವಾಜಿ ಗಡಿಯಾಳಕರ ರವರು ಗಿಡಗಳನ್ನು ಕಡೆದು, ತುಂಡುಗಳನ್ನಾಗಿ ಮಾಡಿ ತಲೆಯ ಮತ್ತು ಹೆಗಲ ಮೇಲೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ಚಾಸಾ 7 ರವರು ಸೂಕ್ಷ್ಮವಾಗಿ ಆರೋಪಿ 1 ಮತ್ತು ಇತರರ ಬಗ್ಗೆ ವಿಚಾರಿಸಿದಾಗ ಆರೋಪಿ 1 ರವರು ಬಡಿಗೆ ಕೆಲಸ ಮಾಡುತ್ತಿದ್ದು ಮತ್ತು ಕಾರ್ಪೆಂಟರ್ ಅಂಗಡಿ ಇಟ್ಟುಕೊಂಡಿರುವುದು ತಿಳಿಯಿತು. ಚಾಸಾ 7 ರವರು ಹೊಸುರು ಶಾಖೆಯ ಉಪ ವಲಯ ಅರಣ್ಯಾಧಿಕಾರಿಗಳಿಗೆ ಆರೋಪಿ 1 ಮತ್ತು ಅಂಗಡಿಯನ್ನು ಶೋಧನೆ ಮಾಡಲು ಶೋಧನಾ ವಾರಂಟ್ ಜಾರಿ ಮಾಡಿದರು. ನಾವು ಮತ್ತು ಸಿಬ್ಬಂದಿ ರವರು ಮತ್ತು ಪಂಚರು ಸೇರಿ ಇಲಾಖಾ ವಾಹನದಲ್ಲಿ ಆರೋಪಿ 1 ರವರ ಮನೆಗೆ ಹೋಗಿ ಆರೋಪಿ 1 ರವರ ಬಗ್ಗೆ ಅವರ ಮನೆಯವರಿಗೆ ವಿಚಾರಿಸಲಾಗಿ ಅವರ ಹೆಂಡತಿ ಆರೋಪಿ 1 ರವರು ಮನೆಯಲ್ಲಿ ಇಲ್ಲ ಎಂದು ತಿಳಿಸಿದರು. ಆಗ ಅವರಿಗೆ ಶೋಧನಾ ವಾರಂಟ್ ಅನ್ನು ತೋರಿಸಿ ಅವರ ಒಪ್ಪಿಗೆ ಪಡೆದು ಅವರ ಮನೆಯನ್ನು ಶೋಧನೆ ಮಾಡಿದೆವು. ಅವರ ಮನೆಯ ಕಟ್ಟೆಗೆಯಲ್ಲಿ ಕೆಲವು ಸಾಗವಾಣಿ ನಗಗಳು ಕಂಡು ಬಂದವು. ಅವುಗಳನ್ನು ಹೊರಗೆ ತೆಗೆದು ನೋಡಲಾಗಿ ಅವುಗಳ ಮೇಲೆ ಯಾವುದೇ ಗುನ್ನೆ ಛಾಪಾ ಇರಲಿಲ್ಲ. ಅವರಿಗೆ ಸದರಿ ಕಟ್ಟೆಗೆಯ ಕುರಿತು ಪಾಸ್ ಅಥವಾ ಪರ್ಮಿಟ್ ಬಗ್ಗೆ ವಿಚಾರಿಸಿದಾಗ ಅವರು ಇರುವುದಿಲ್ಲ ಎಂದು ತಿಳಿಸಿದರು. ಅಷ್ಟರಲ್ಲಿ ಆರೋಪಿ 1 ರವರು ಬಂದರು. ಅವರಿಗೆ ಪಾಸ್ ಅಥವಾ ಪರ್ಮಿಟ್ ಬಗ್ಗೆ ವಿಚಾರಿಸಿದಾಗ ಅವರು ಇರುವುದಿಲ್ಲ ಎಂದು ತಿಳಿಸಿದರು. ಆತನು ಮುಂದುವರೆದು ಸದರಿ ಕಟ್ಟೆಗೆಯನ್ನು ಅರಣ್ಯ ಪ್ರದೇಶದಿಂದ ತಂದು ಮಷಿನ್ ಯಿಂದ ಕೊರೆದು ನಗಗಳನ್ನಾಗಿ ಮಾಡಿ ತಮ್ಮ ಕಟ್ಟೆಗೆಗಳಲ್ಲಿ ಜೋಡಿಸಿ ಇಟ್ಟಿರುತ್ತೇನೆ ಎಂದು ತಿಳಿಸಿ, ತನ್ನ ತಪ್ಪನ್ನು ಒಪ್ಪಿಕೊಂಡನು. ನಂತರ ಸದರಿ 88 ನಗಗಳನ್ನು ಅಳತೆ ಮಾಡಿದೆವು, ಒಟ್ಟು 2.104 ಕ್ಯೂ. ಮೀಟರ್ ನಗದು ಆಗಿದ್ದವು. ನಂತರ ನಗಗಳಿಗೆ ಗುನ್ನೆ ಛಾಪಾ ಹಾಕಿ ಪಂಚರ ಸಮಕ್ಷಮ ಅವುಗಳನ್ನು ಜಪ್ತುಪಡಿಸಿಕೊಂಡೆವು. ನಂತರ ಆರೋಪಿ 1 ರವರ ಅಂಗಡಿಯನ್ನು ಪರಿಶೀಲಿಸಲಾಗಿ ಕೆಲವು ನಗಗಳಿಗೆ ಛಾಪಾ ಮುದ್ರಿಸಿರುವುದು ಇರಲಿಲ್ಲ. ನಂತರ ಸದರಿ ನಗಗಳನ್ನು ಅಳತೆ ಮಾಡಿ ಅನುಕ್ರಮ ಸಂಖ್ಯೆ 88 ರಿಂದ 275 ರ ವರೆಗೆ ಸಂಖ್ಯೆ ಹಾಕಿ ಒಟ್ಟು 0.588 ಕ್ಯೂ.ಮೀಟರ್ ಆಗಿತ್ತು, ಒಟ್ಟು 275 ನಗಗಳು 2.692 ಕ್ಯೂ. ಮೀಟರ ಆರೋಪಿ 1 ಹಾಗೂ ಆತನ ಅಂಗಡಿಯಲ್ಲಿ ಸಿಕ್ಕವು. ಅವುಗಳನ್ನು ಮತ್ತು ಸಾಗ ಗಿಡಗಳನ್ನು ಕೊರೆಯಲು ಉಪಯೋಗಿಸಿದ ಸಾಮಗ್ರಿಗಳಾದ Jai Industries Planning machine–1, Havels Indio Lts Turning machine–1, Planning Machine Blades 5, ½, Riggi–1, Indica Router–1, Samsung Mobile ಹಾಗೂ ಎರಡು ಗರಗಸಗಳನ್ನು (ಒಂದು ಉದ್ದ ಮತ್ತು ಒಂದು ಅಡ್ಡ) ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡೆವು. ಸದರಿ ಆರೋಪಿತರಿಗೆ ಸದರಿ ಮರಗಳ ಬುಡಚೆಯನ್ನು ತೋರಿಸಲು ಕೇಳಿದಾಗ ಅವರು ನಮ್ಮನ್ನು ಮನೆಯಿಂದ ಕಾಲು ನಡಿಗೆಯಿಂದ 1 ಕಿ.ಮೀ ದೂರದ ಅರಣ್ಯದಲ್ಲಿ ಕರೆದುಕೊಂಡು ಹೋಗಿ

ಕಡಿದ ಬುಡಚಿಗಳನ್ನು ತೋರಿಸಿದರು. ನಾವು ಗಸ್ತು ತಿರುಗಿ ನೋಡಿ ಬುಡಚಿಗಳು ಹಾಗೂ ಆರೋಪಿತರು ತೋರಿಸಿದ ಬುಡುಚಿಗಳು ಒಂದೇ ಆಗಿದ್ದವು. ಅದರಿಂದಾಗಿ ಆರೋಪಿತರು ಸಾಗ ಮರಗಳನ್ನು ಕಡೆದು ನಗಗಳನ್ನು ತೆಗೆದುಕೊಂಡು ಹೋಗಿರುವುದು ಖಾತ್ರಿಯಾಯಿತು. ಸದರಿ ಜಾಗವು ಗ್ರಾಮ ನಕಾಶೆಯ ಸಹಾಯದಿಂದ ದೊಡ್ಡಕೊಪ್ಪ ಅರಣ್ಯ ಸರ್ವೇ ನಂಬರ 72 ರಲ್ಲಿ ಬರುತ್ತದೆ ಎಂದು ಖಚಿತಪಡಿಸಿಕೂಂಡೆವು. ಸದರಿ ಜಾಗದ ಚಕ್ಕು ಬಂದಿ ನಮೂದಿಸಿಕೊಂಡೆವು. ನಂತರ ಆರೋಪಿತರಿಗೆ ಅವರು ಮಾಡಿರುವುದು ಅಪರಾಧ ಎಂದು ತಿಳಿಸಿ ಅವರನ್ನು ದಸ್ತಗೀರ್ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದೆವು. ಜಾಗದಲ್ಲಿ ಪಂಚನಾವೆಯನ್ನು ಬೆಳಗ್ಗೆ 09-30 ರಿಂದ ಸಂಜೆ 03-25 ಕ್ಕೆ ಬರೆದು ಮುಗಿಸಲಾಗಿಯಿತು. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿ ಪಂಚನಾಮೆ ಮತ್ತು ಅವರ ಸಹಿಯನ್ನು ಗುರುತಿಸಿದ್ದ, ಸದರಿ ಪಂಚನಾಮೆಯನ್ನು **ನಿಪಿ 2 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 2 ಎ ಎಂದು** ಗುರುತಿಸಲಾಯಿತು.

ಗುನ್ನೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈಗ ನ್ಯಾಯಾಲಯದ ಮುಂದೆ ಆರೋಪಿತರಾಗಿ ಇರುತ್ತಾರೆ.

ಜಪ್ತುಪಡಿಸಿಕೊಂಡ ಸಾಮಗ್ರಿಗಳನ್ನು ನೋಡಿದರೆ ಗುರುತಿಸುತ್ತೇನೆ. ಮಾನ್ಯ ಸ.ಸ.ಅ ರವರು ಸದರಿ ಸಾಮಗ್ರಿಗಳ ಭಾವತಚಿತ್ರಗಳನ್ನು ಸಾಕ್ಷಿಗೆ ತೋರಿಸಿ ಅವುಗಳನ್ನು ಗುರುತಿಸುವಂತೆ ಕೋರಿದ್ದು, ಸದರಿ ಭಾವಚಿತ್ರಗಳೊಂದಿಗೆ ಭಾ.ಸಾ. ಅಧಿನಿಯಮ 65 ಬಿ ರಡಿಯಲ್ಲಿ ಪ್ರಮಾಣ ಪತ್ರ ಸಲ್ಲಿಸದ ಕಾರಣ ಸದರಿ ಭಾವಚಿತ್ರಗಳನ್ನು ಗುರುತಿಸಲು ಬರುವುದಿಲ್ಲ ಎಂದು ಮನವಿಯನ್ನು ತಿರಸ್ಕರಿಸಲಾಯಿತು.

ಈ ಕುರಿತು ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು :** ಆರೋಪಿ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ಘಟನೆಯ ಸಮಯದಲ್ಲಿ ನಾನು ಸಾಂಬ್ರಾಣಿ ವಲಯ ಕಚೇರಿಯಲ್ಲಿ ಇದೆ. ಸಾಂಬ್ರಾಣಿಯಿಂದ ದೊಡ್ಡಕೊಪ್ಪಕ್ಕೆ ಹೋಗಲು ಅರ್ಧ ಗಂಟೆ ಬೇಕು. ಬುಡಚಿಗಳು ಇರುವ ಜಾಗದ ಪಕ್ಕದಲ್ಲಿ ಮಾಲ್ಕಿ ಜಮೀನು ಇವೆ ಎಂದರೆ ಸರಿ. ಅಲ್ಲಿ ರೈತರು ಕೆಲಸ ಮಾಡುತ್ತಿರುತ್ತಾರೆ ಎಂದರೆ ಸರಿ. ಘಟನೆ ಜೂನ್ ತಿಂಗಳಲ್ಲಿ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ ರೈತರು ಹೊಲದಲ್ಲಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ಸರಿ. ಬುಡಚಿ ತೆಗೆದ ಜಾಗದ ಪಕ್ಕದ ಜಮೀನಿನಲ್ಲಿ ರೈತರು ಇದ್ದರು ಅವರು ಆರೋಪಿ 1 ರವರು ಸಾಗ ಮರದ ತುಂಡುಗಳ್ಳು ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿದಿದ್ದು, ಆ ರೈತನ ಹೆಸರನ್ನು ನಿಮ್ಮ ಹೇಳಿಕೆಯಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅವರನ್ನು ಸಾಕ್ಷಿದಾರರಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ ಎನ್ನುತ್ತಾರೆ. ಸರ್ವೇ ನಂಬರ 72 ರಲ್ಲಿ ಎಷ್ಟು ಗಿಡಗಳು ಇವೆ ಎಂದು ಹೇಳಲು ಆಗುವುದಿಲ್ಲ. ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಸಾಮಾನ್ಯವಾಗಿ ನಿಮ್ಮ ಕಚೇರಿಯವರು

ಮಾತ್ರ ಓಡಾಡುತ್ತಿರುತ್ತಾರೆ ಎಂದರೆ ಸರಿ. ಅರಣ್ಯದಲ್ಲಿನ ಒಣ ಮರಗಳನ್ನು ಮತ್ತು ಜಲಾವನ್ನು ನಿಮ್ಮ ಇಲಾಖೆಯಿಂದ ಕತ್ತರಿಸಲಾಗುತ್ತದೆ ಎಂದರೆ ಸರಿ. ನಿಮ್ಮ ಇಲಾಖೆಯವರು ಕತ್ತರಿಸಿದ ಬುಡಚಿಗಳನ್ನು ಈ ಪ್ರಕರಣದಲ್ಲಿ ನೀವು ತೋರಿಸಿರುತ್ತೀರಿ ಎಂದರೆ ಸರಿ. ಈ ಪ್ರಕರಣದಲ್ಲಿನ ಉಪ ವಲಯ ಅರಣ್ಯಾಧಿಕಾರಿಯಾದ ಉಮೇಶಕುಮಾರ ನಾಯ್ಕ ರವರನ್ನು ಇದೇ ರೀತಿ ಕಟ್ಟಿಗೆ ವ್ಯವಹಾರ ಮಾಡುತ್ತಾರೆ ಎಂದು ಅಮಾನತ್ತು ಮಾಡಲಾಗಿತ್ತು ಎಂದರೆ ಸಾಕ್ಷಿ ಈ ಪ್ರಕರಣ ಆದ ನಂತರ ಅವರನ್ನು ಅಮಾನತ್ತು ಮಾಡಲಾಗಿತ್ತು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸಾಂಬ್ರಾಣಿ ಶಾಖೆಯಲ್ಲಿ ಅಮಾನತ್ತು ಆಗಿದ್ದರು ಎನ್ನುತ್ತಾರೆ. ಅರಣ್ಯ ರಕ್ಷಕರು ಅರಣ್ಯವನ್ನು ವೀಕ್ಷಣೆ ಮಾಡುತ್ತಿರುತ್ತಾರೆ ಎಂದರೆ ಸರಿ. ನಿಮ್ಮ ಶಾಖೆಯಲ್ಲಿ ಸಂಗ್ರಹಿಸಿ ಇಟ್ಟ ಮು.ಮಾ. ಗಳನ್ನು ಜಪ್ತಿಪಡಿಸಿ ಈ ಪ್ರಕರಣದಲ್ಲಿ ತೋರಿಸಿದ್ದೀರಿ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ತೋರಿಸಿದ ಮಷಿನ್ ಗಳು ಸಹ ಬೇರೆ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ಮು.ಮಾ. ಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಭಾವಚಿತ್ರಗಳಲ್ಲಿ ಎಲ್ಲಿಯೂ ಕಟ್ಟಿಗೆ ಪುಡಿ ಬಿದ್ದಿರುವುದು ಕಾಣುವುದಿಲ್ಲ ಎಂದರೆ ಸಾಕ್ಷಿ ಆರೋಪಿತರು ಸಾಗ ಮರಗಳನ್ನು ತಂದು ಅವುಗಳಿಂದ ತುಂಡು ಮಾಡಿ ಅವರ ಮನೆಯಲ್ಲಿ ಮತ್ತು ಅಂಗಡಿಯಲ್ಲಿ ಇಟ್ಟಿದ್ದರು ಹಾಗಾಗಿ ಆ ಮಷಿನ್ ಗಳನ್ನು ಜಪ್ತುಪಡಿಸಿಕೊಂಡಿದ್ದೇವೆ ಎನ್ನುತ್ತಾರೆ. ಆರೋಪಿ 3 ರವರು ಬಡಿಗೆ ಕೆಲಸ ಮಾಡುತ್ತಾರೆ. ಆರೋಪಿ 1 ರವರು ಅಂಗಡಿ ಇಟ್ಟುಕೊಂಡಿದ್ದಾರೆ, ಆರೋಪಿ 3 ರವರಿಂದ ಕೆಲಸ ಮಾಡಿಸಿಕೊಳ್ಳುತ್ತಾರೆ. ಹಳ್ಳಿಯ ಜನ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲು ಆರೋಪಿ 2 ರವರ ಬಳಿ ಹೋಗುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿತರು ಪೀಠೋಪಕರಣಗಳನ್ನು ಮಾಡುತ್ತಾರೆ ಎನ್ನುತ್ತಾರೆ. ಆರೋಪಿತರು ಬಡಿಗೆ ಕೆಲಸ ಮಾಡುತ್ತಾರೆ ಎಂದು ನಿಮ್ಮ ಇಲಾಖೆಯ ಅಂಕಿ ಸಂಖ್ಯೆಗೋಸ್ಕರ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರಕರಣದ ಪಂಚರು ನಿಮ್ಮ ಇಲಾಖೆಯವರು ಎಂದರೆ ಸರಿ. ಸಾಕ್ಷಿ ಮುಂದುವರೆದು ಗ್ರಾಮಸ್ಥರು ಲಭ್ಯ ಇರದ ಕಾರಣ ನಮ್ಮ ಇಲಾಖೆಯ ಸಿಬ್ಬಂದಿಯವರನ್ನು ಪಂಚರನ್ನಾಗಿ ಮಾಡಿದ್ದೇವೆ ಎನ್ನುತ್ತಾರೆ. ಸ್ಥಳೀಯರನ್ನು ಪಂಚರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರು ಪಂಚರಾಗಲು ಒಪ್ಪಲಿಲ್ಲ ಎನ್ನುತ್ತಾರೆ. ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿಯೇ ನಮ್ಮ ಇಲಾಖಾ ವಾಹನದಲ್ಲಿ ಘಟನಾ ಜಾಗಕ್ಕೆ ಕರೆದುಕೊಂಡು ಹೋಗಿದ್ದೇವೆ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.